ಅಸಲು ದಾವಾ ನಂ. 149/2023
ಪಿ ಡಬ್ಲು -1

ದಿನಾಂಕಃ 23-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ . ಎಸ್ ಎಸ್ ಹೆಚ್ ವಕೀಲರಿಂದ .**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಬರದೂರು ಗ್ರಾಮದ ಸರ್ವೆ ನಂ.73 ಇದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-1 ಎಂದು, ಸರ್ವೆ ನಂ. 73/1 ರ ಕೈ ಬರಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-2 ಎಂದು, ಸರ್ವೆ ನಂ. 73/2 ರ ಕೈಬರಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-3 ಎಂದು, ತಹಶೀಲ್ದಾರ ಕಾರ್ಯಾಲಯ, ಸವಣೂರ ಇವರ ಹಿಂಬರಹ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-4 ಎಂದು, ಸರ್ವೆ ನಂ. 73 ರ ಕೈಬರಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-5 ಎಂದು, ಅಸಲು ದಾವಾ ನಂ.166/1974 ರ ಹುಕುಂ ನಾಮೆಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು, ದಿನಾಂಕ 28-12-1999 ರ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-7 ಎಂದು, ನನ್ನ ತಂದೆ ಪುಟ್ಟಪ್ಪ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-8 ಎಂದು, ನನ್ನ ಅಣ್ಣ ಚನಬಸಪ್ಪ ಮತ್ತು ಮಹಾಲಿಂಗಪ್ಪ ಇವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-9 ಮತ್ತು ನಿಪಿ-10 ಎಂದು, ನನ್ನ ಅಜ್ಜಿ ನಿಂಗಮ್ಮ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

ಅಸಲು ದಾವಾ ನಂ. 149/2023
ಪಿ ಡಬ್ಲು -1

**<u>ಪಾಟಿ ಸವಾಲುಃ-</u>** ಪ್ರತಿವಾದಿ ಪರ ಶ್ರೀ.ಎಮ್ ಎಸ್ ಎಮ್ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).